# 12ನೇ ಶತಮಾನದ ಧಾರ್ಮಿಕ ಸ್ಥಿತಿ, ಸಾಮಾಜಿಕ ಸ್ಥಿತಿ ಹಾಗೂ ಸಾಹಿತ್ಯ ಸ್ವರೂಪ

ಡಾ.ಲಕ್ಷ್ಮೀನಾರಾಯಣ ಎ.ವಿ
ಸಹ ಪ್ರಾಧ್ಯಾಪಕರು
ಸ.ಪ್ರ.ದ.ಕಾ ಕೆಂಗೇರಿ
Corresponding Author:lakshminarayan2453@gmail.com

ಕರ್ನಾಟಕ ಬೌದ್ಧ, ಜೈನ, ಶೈವ, ವೈಷ್ಣವ ಮುಂತಾದ ಧರ್ಮಗಳನ್ನು ಸಾವಿರಾರು ವರ್ಷಗಳಿಂದ ತನ್ನ ಒಡಲಲ್ಲಿಟ್ಟುಕೊಂಡು ಪೋಷಿಸುತ್ತ ಬಂದಿದೆ. ಸಾವಿರಾರು ವರ್ಷಗಳಿಂದ ಈ ನೆಲದಲ್ಲಿ ಬಹುಧರ್ಮೀಯರು ಸ್ನೇಹ ಮತ್ತು ಸೌಹಾರ್ದತೆಯಿಂದ ಬಾಳುತ್ತಿದ್ದರು. ಈ ನಾಡನ್ನು ಆಳಿಹೋದ ಅನೇಕ ರಾಜರು ಧಾರ್ಮಿಕ ಸಾಮರಸ್ಯಕ್ಕೆ ಪ್ರೋತ್ಸಾಹಕೊಟ್ಟಿದ್ದರು. ಚಾಲುಕ್ಯರ ಪ್ರಸಿದ್ಧ ದೊರೆ ಆರನೆಯ ವಿಕ್ರಮಾದಿತ್ಯ, ಹೊಯ್ಸಳರ ವಿಷ್ಣುವರ್ಧನನ ಕಾಲದಲ್ಲಿ ಸರ್ವಧರ್ಮ ಸಮನ್ವಯವನ್ನು ಕಾಪಾಡಿಕೊಂಡು ಬಂದಿದ್ದರು ಎಂಬುದನ್ನು ಇತಿಹಾಸದಲ್ಲಿ ನೋಡಬಹುದು.

## ಬೌದ್ಧ ಧರ್ಮ:

ಕರ್ನಾಟಕದಲ್ಲಿದ್ದ ಬೌದ್ಧ ಧರ್ಮ 12ನೇ ಶತಮಾನದ ವೇಳೆಗೆ ಅತ್ಯಂತ ದುರ್ಬಲವಾಗಿತ್ತು. "ಚಾಲುಕ್ಯ ದೊರೆ ಆಹವಮಲ್ಲನ ಕಾಲದಲ್ಲಿ ಆತನ ಮಂತ್ರಿ ಮತ್ತು ದಂಡನಾಯಕ ರೂಪಭಟ್ಟಯ್ಯ ಎಂಬುವನು ಬಳ್ಳಿಗಾವೆಯಲ್ಲಿ ಬೌದ್ಧ ವಿಹಾರ ನಿರ್ಮಿಸಿದ ಬಗ್ಗೆ ಶಿಕಾರಿಪುರದ 170ನೇ ಶಾಸನ ತಿಳಿಸುತ್ತದೆ"[1].

## ಜೈನ ಧರ್ಮ:

ಜೈನ ಧರ್ಮ 10ನೇ ಶತಮಾನದಲ್ಲಿ ಅತ್ಯಂತ ಉನ್ನತ ಸ್ಥಿತಿಯಲ್ಲಿತ್ತು. ಆ ಸಂದರ್ಭದಲ್ಲಿ ಕರ್ನಾಟಕವನ್ನಾಳಿದ ಅನೇಕ ರಾಜರು ಜೈನ ಮತಕ್ಕೆ ವಿಶೇಷವಾದ ಸ್ಥಾನಮಾನವನ್ನು ನೀಡಿ ಪ್ರೋತ್ಸಾಹಿಸಿದರು. ತಲಕಾಡಿನ ಗಂಗರು, ರಾಷ್ಟ್ರಕೂಟರು, ಬಾದಾಮಿಯ ಚಾಲುಕ್ಯರು, ಕಂಚಿಯ ಪಲ್ಲವರು, ಬನವಾಸಿಯ ಕದಂಬರು ಪ್ರಮುಖರು, "ಸು ಆರನೆಯ ಶತಮಾನದಲ್ಲಿ ಬರುವ ದುರ್ವಿನೀತ, ತಂಬಲೂರಾಚಾರ್ಯ(ಸು.650),ಶ್ಯಾಮಕುಂದಾಚಾರ್ಯ (ಸು.650), ಅಸಗ (ಸು.853), ಗುಣನಂದಿ (ಸು.900), 1ನೇ ಗುಣವರ್ಮ (ಸು.900), ಶಿವಕೋಟ್ಯಾಚಾರ್ಯ(ಸು.920)"[2] ಮುಂತಾದ ಕವಿಗಳು ಪಂಪ ಪೂರ್ವಯುಗದ ಜೈನಧರ್ಮೀಯರು, ಅನಂತರ ಪಂಪನ ಕಾಲದಲ್ಲಿ ಬರುವ ಪ್ರಮುಖ ಜೈನಕವಿಗಳು "ಪಂಪ(940), ಪೊನ್ನ(950), ಚಾವುಂಡರಾಯ (ಸು.925), ರನ್ನ (ಸು.990), ಶಾಂತಿನಾಥ (ಸು.1070), ನಾಗಚಂದ್ರ(ಸು.1100), ಕಂತಿ (ಸು.1100), ನಯಸೇನ(ಸು.1150), ಮೊದಲಾದವರು".[3]–ಹೀಗೆ ಜೈನ ಕವಿಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇಲ್ಲಿನ ಅನೇಕ ಕವಿಗಳಿಗೆ ರಾಜರು ಆಶ್ರಯ ನೀಡಿ ಅವರ ಸಾಹಿತ್ಯ ಕೃಷಿಗೆ ವಿಶೇಷ ಉತ್ತೇಜನ ನೀಡಿದ್ದರು. ಪಂಪನಿಗೆ ಚಾಲುಕ್ಯ ದೊರೆ ಅರಿಕೇಸರಿ. ಪೊನ್ನನಿಗೆ ರಾಷ್ಟ್ರಕೂಟರ 3ನೆಯ ಕೃಷ್ಣ, ರನ್ನನಿಗೆ ಚಾಲುಕ್ಯ ದೊರೆ ತೈಲಪ ಸತ್ಯಾಶ್ರಯ, ನಾಗಚಂದ್ರನಿಗೆ ಹೊಯ್ಸಳ ಒಂದನೇ ಬಲ್ಲಾಳ–ಹೀಗೆ ರಾಜರು ಆಶ್ರಯ ನೀಡಿದ್ದರು. ಕನ್ನಡದ ಈ ಕವಿಗಳು ರಚಿಸಿದ ಶ್ರೇಷ್ಠವಾದ ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯದ ಅಮೂಲ್ಯ ರತ್ನಗಳಾಗಿವೆ. ಇದರಿಂದ ನಮಗೆ ವ್ಯಕ್ತವಾಗುವ ಸಂಗತಿಯೆಂದರೆ ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ಸಿಕ್ಕಿದ ಮಾನ್ಯತೆ ಉತ್ಕೃಷ್ಟವಾದದು. ಅದಲ್ಲದೆ ಇಂದಿಗೂ ಕರ್ನಾಟಕದ ಅನೇಕ ಭಾಗಗಳಲ್ಲಿ ಜಿನಮಂದಿರಗಳನ್ನು ಕಾಣಬಹುದು. ನಾಡಿನ ಅನೇಕ ಭಾಗಗಳಲ್ಲಿ ಇಂದಿಗೂ ಜೈನ ಸಮುದಾಯ ನೆಲೆಸಿರುವುದನ್ನು ಕಾಣಬಹುದು. ಕಾಲಾನಂತರ ಜೈನ ಧರ್ಮಕ್ಕೆ ಪ್ರೋತ್ಸಾಹ ಕೊಟ್ಟಿದ್ದ ಆರಸರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡರು ಮತ್ತು ಇತರ ಅನ್ಯ ರಾಜರ ದಾಳಿಗಳಿಂದಲೂ ಅವರ ಪ್ರಾಬಲ್ಯ ಕ್ಷೀಣಿಸುತ್ತಾ ಹೋಯಿತು. ಅಲ್ಲದೇ, ಜೈನ ಧರ್ಮದ ಮೂಲತತ್ವಗಳಾದ ಸಮ್ಯದ್ದರ್ಶನದ ಅಷ್ಟಾಂಗಗಳು, ಕರ್ಮ, ತಪ, ಜಪ ಹಾಗೂ ತೀವ್ರತರ ವೈರಾಗ್ಯ, ಪರದ ಬಗ್ಗೆ ತೀವ್ರತರವಾದ ವ್ಯಾಮೋಹ–ಮುಂತಾದವುಗಳನ್ನು ಅನುಸರಿಸುವುದು ಸಾಮಾನ್ಯ ಜನರಿಗೆ ಕಷ್ಟವೆನಿಸಿರಬೇಕು. ಈ ಕಾರಣಗಳಿಂದ ಜೈನ ಧರ್ಮ ಕರ್ನಾಟಕದಲ್ಲಿ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳಬೇಕಾಯಿತು.

**ವೈದಿಕ ಧರ್ಮ:**

ವೇದೋಕ್ತವಾದ ವೈದಿಕ ಧರ್ಮ 10–11ನೇ ಶತಮಾನದಲ್ಲಿ ಬೌದ್ಧ, ಜೈನ ಧರ್ಮಗಳ ಜೊತೆ ಸೆಣಸುತ್ತಲೇ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿತ್ತು. ಅಷ್ಟೊತ್ತಿಗಾಗಲೇ ಬೌದ್ಧಧರ್ಮ ಹಿನ್ನಡೆಯನ್ನು ಅನುಭವಿಸುತ್ತಿತ್ತು. ಋಗ್ವೇದ ಪುರುಷ ಸೂಕ್ತದಲ್ಲಿ ನಿರೂಪಿಸಲಾಗಿರುವ ನಾಲ್ಕು ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ವರ್ಣಗಳು ಕಾಲಾನಂತರ ಅನೇಕ ಜಾತಿಗಳಾಗಿ, ಉಪಜಾತಿಗಳಾಗಿ ಹೋದವು. ಮೇಲಿನ ನಾಲ್ಕು ವರ್ಣಗಳಲ್ಲದೆ ಐದನೆಯ ವರ್ಣವಾಗಿ ಪಂಚಮರು ಅಥವಾ ಅಸ್ಪೃಶ್ಯರೆಂದು ಕರೆಯಲ್ಪಡುವ ಈ ವರ್ಗ ಅತ್ಯಂತ ನಿಕೃಷ್ಟರಾದ ಅವಮಾನಕರವಾದ ಜೀವನ ಸಾಗಿಸುತ್ತಾ ಬಂದಿದೆ. ಕಾಲಾನಂತರ ಈ ಜಾತಿಗಳಲ್ಲೆ ಮೇಲು–ಕೀಳು ಎಂಬ ಭೇದಭಾವ ಬೆಳೆದು ಇಡೀ ಸಮಾಜವನ್ನೇ ಛಿದ್ರಗೊಳಿಸಿತು. ಮನುಷ್ಯ– ಮನುಷ್ಯರ ನಡುವೆ ತರತಮಗಳು ಸೃಷ್ಟಿಯಾಗಿ, ಮಾನವೀಯತೆ ಮಾಯವಾಗಿದೆ. ಸಮಾಜದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ವಿದ್ಯೆ ಕಲಿಯುವ ಅವಕಾಶವಿತ್ತು. ಉಳಿದ ಬಹುಪಾಲು ಜಾತಿ ಜನರಿಗೆ ವಿದ್ಯೆ ಕಲಿಯಲು ಅವಕಾಶವಿರಲಿಲ್ಲ. ವೇದಾಧ್ಯಯನವಂತೂ ಕನಸಿನ ಮಾತು. ಒಂದು ವೇಳೆ ಶೂದ್ರಾತಿಶೂದ್ರರು ವೇದಗಳನ್ನು ಪಠಿಸುವುದಾಗಲಿ, ಪಠಿಸುವ ಸಂದರ್ಭದಲ್ಲಿ ಕದ್ದು ಕೇಳಿಸಿಕೊಂಡರಾಗಲಿ, ಅಂತಹವರ ಕಿವಿಗೆ ಕಾದ ಸೀಸವನ್ನು ಸುರಿಯುವಂತೆಯೂ ವೇದ ಓದಿದ ಶೂದ್ರನನ್ನು ವಧೆ ಮಾಡಬೇಕೆಂದೂ ಧರ್ಮಗ್ರಂಥಗಳು ಕಟ್ಟಪ್ಪಣೆ ಹೊರಡಿಸಿವೆ. ಅಸ್ಪೃಶ್ಯ ವರ್ಗವಂತೂ ಯಾವುದೇ ಧಾರ್ಮಿಕ ಕಾರ್ಯ ಮತ್ತು ದೇವಾಲಯಗಳಿಂದ ಯೋಜನ ದೂರವಿರಬೇಕಿತ್ತು. ಧಾರ್ಮಿಕ ಕೇಂದ್ರಗಳಾದ ದೇವಾಲಯಗಳು ಕಾಲಕ್ರಮೇಣ ಒಂದು ರೀತಿಯ ವ್ಯವಹಾರ ಕೇಂದ್ರಗಳಾಗಿ ಮಾರ್ಪಟ್ಟವು. ಅಲ್ಲಿ ಭಕ್ತ ಮತ್ತು ಭಗವಂತನ ನಡುವೆ ಪೂಜಾರಿ ಪುರೋಹಿತ ಎಂಬ ಮಧ್ಯವರ್ತಿಗಳ ಪ್ರವೇಶದಿಂದಾಗಿ ದೇವರು ಧರ್ಮದ ಹೆಸರಿನಲ್ಲಿ ದುರಾಚಾರಿಗಳು ಹೆಚ್ಚಾದರು. ಅಂತರಂಗ ಶುದ್ಧಿಗಿಂತಲೂ ಧಾರ್ಮಿಕ ವೇಷಭೂಷಣಗಳು, ಜಪ, ತಪ, ವ್ರತ, ಹೋಮ ಹವನಗಳಿಗೆ ಹೆಚ್ಚು ಮಾನ್ಯತೆ ನೀಡಲಾಯಿತು. ಅರ್ಥವಾಗದ ಭಾಷೆಯಲ್ಲಿ ಜಪ, ತಪಗಳು ನಡೆಯುತ್ತಿದ್ದುದರಿಂದ ಇವೆಲ್ಲ ಜನರಿಗೆ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗಿತ್ತು.

ಹೀಗೆ ವೈದಿಕ ಧರ್ಮದ ಧಾರ್ಮಿಕ ಕ್ರಿಯೆಗಳಿಂದ ದೂರ ಸರಿಸಲ್ಪಟ್ಟ ಕೆಳಜಾತಿ, ಜನರು ಕಲ್ಲು, ಗಿಡ, ಮರ, ಪ್ರಾಣಿ, ಪಕ್ಷಿ ಇತ್ಯಾದಿ ವಸ್ತುಗಳನ್ನು ದೇವರೆಂದು ಭಾವಿಸಿ ಪೂಜಿಸತೊಡಗಿದರು. ಅಲ್ಲದೆ ಕಾಳಿ, ಮಾರಿ, ಚೌಡಿ. ದುರ್ಗಿ. ಮುಂತಾದ ಉಗ್ರದೇವತೆಗಳನ್ನು ಪೂಜಿಸುವುದಲ್ಲದೆ ಅವುಗಳಿಗೆ ಕುರಿ, ಕೋಳಿ, ಕೋಣ ಮುಂತಾದ ಪ್ರಾಣಿಗಳನ್ನು ಬಲಿ ಕೊಟ್ಟು ತಮ್ಮ ಹರಕೆಗಳನ್ನು ತೀರಿಸಿಕೊಳ್ಳುತ್ತಿದ್ದರು.

ಹೀಗೆ ದೇವರ ಹೆಸರಲ್ಲಿ ಅಜ್ಞಾನದಿಂದ ನಡೆಯುತ್ತಿದ್ದ ಆಚರಣೆಗಳು ಕೆಳಜಾತಿ ಜನರಲ್ಲಿ ನಿರಂತರವಾಗಿ ನಡೆಯುತ್ತಾ ಬಂದವು. ಬೌದ್ಧ, ಜೈನ, ವೈದಿಕ ಧರ್ಮಗಳಲ್ಲದೆ ಶೈವ, ಪಾಶುಪತ, ಕಾಳಾಮುಖ ಮೊದಲಾದ ಮತಗಳು ಹೀಗೆ ದೇವರ ಹೆಸರಲ್ಲಿ ಅಜ್ಞಾನದಿಂದ ನಡೆಯುತ್ತಿದ್ದ ಆಚರಣೆಗಳು ಕರ್ನಾಟಕದಲ್ಲಿ ನೆಲೆಸಿದ್ದವು. ಶೈವ ಧರ್ಮ 12ನೆಯ ಶತಮಾನದಲ್ಲಿ ತನ್ನ ಧಾರ್ಮಿಕ ಕ್ರಿಯೆಗಳನ್ನು ರೂಢಿಸಿಕೊಂಡಿದ್ದವು. "ಆ ಧರ್ಮದಲ್ಲಿ ನಾನಾ ಅಸ್ತಿತ್ವಕ್ಕಾಗಿ ಸೆಣಸಾಡುತ್ತಿತ್ತು. ಇದರಲ್ಲಿ ಒಳಪಂಗಡಗಳಿದ್ದು ಪರಸ್ಪರ ಭಿನ್ನವಾದ ಪಂಥಗ□□ □□□□ ಅವುಗಳ ಸ್ವರೂಪ, ಪರಸ್ಪರ ಭೇದಗಳನ್ನು ಗುರುತಿಸುವುದು ಅಸಾಧ್ಯವಾಗಿತ್ತು. ಅವರು ಶುದ್ಧ ಶೈವ, ಮಾರ್ಗಶೈವ, ಮಿಶ್ರ ಶೈವ ಇತ್ಯಾದಿ ಹೆಸರುಗಳನ್ನು ಬಳಸಿಕೊಂಡಿದ್ದರು. ಇವೆಲ್ಲಕ್ಕಿಂತ ವೀರಶೈವ ಧರ್ಮವೇ ಶ್ರೇಷ್ಠ ಎಂದು ಪರಿಗಣಿಸಿದ್ದರು."[4]

ಪಾಶುಪತ ಸಂಪ್ರದಾಯದವರು ಯಾವುದೇ ರೀತಿಯ ಲೋಭಮೋಹಗಳಿಗೆ ಒಳಗಾಗದೆ ಲೌಕಿಕ ಜೀವನದಿಂದ ಹೊರಗುಳಿದು ವಿರಕ್ತರಾಗಿ ಸ್ಮಶಾನವಾಸಿಗಳಾಗಿದ್ದರು. "ಕ್ರಾಥನ–ಮಲಗದೆ ಇದ್ದರೂ ಮಲಗಿದಂತೆ ತೋರಿಸುವುದು, ಸ್ಪಂದನ–ಅವಯವಗಳನ್ನು ನಡುಗಿಸುವುದು, ಮಂದನ–ಕಾಲುಗಳು ಊನವಾಗಿದ್ದವನಂತೆ ನಡೆಯುವುದು, ಶೃಂಗಾರ–ಸುಂದರ ಸ್ತ್ರೀಯರನ್ನು ನೋಡಿ ಕಾಮಪ್ರವೃತ್ತಿಯನ್ನು ತೋರಿಸುವಂತೆ ತೋರಿಸುವುದು, ಅವಿತತ್ಕರಣ–ಎಲ್ಲರಿಂದಲೂ ತ್ಯಾಜವಾದುದನ್ನು ಮಾಡುವುದು. ಅವಿತದ್ಭಾಷಣ–ಅಸಂಬದ್ಧ ಮತ್ತು ಬುದ್ಧಿಗೇಡಿತನದ ಮಾತುಗಳನ್ನು ಆಡುವುದು."[5] ಇವು ಈ ಸಂಪ್ರದಾಯದಲ್ಲಿದ್ದವೆಂದು ಹೇಳಲಾಗಿದೆ.

ಕಾಳಾಮುಖ ಸಂಪ್ರದಾಯದವರು ಪಾಶುಪತ ಸಂಪ್ರದಾಯಕ್ಕಿಂತ ಸಂಪೂರ್ಣ ಭಿನ್ನವಾಗಿ ಕಾಣುತ್ತಾರೆ. ಆದರೆ ಕಾಳಾಮುಖರು ಸಾತ್ವಿಕರಾಗಿದ್ದು ಸದಾಚಾರ ಸಂಪನ್ನರಂತೆ ಅವರಲ್ಲಿ ವಿಚಿತ್ರವಾದ ಆಚಾರ ವಿಚಾರಗಳನ್ನು ಕಾಣುತ್ತೇವೆ. ಆದರೆ ಕಾಳಾಮುಖರು ಸಾತ್ವಿಕರಾಗಿದ್ದು ಸದಾಚಾರ ಸಂಪನ್ನರಂತೆ ತೋರುತ್ತಾರೆ. ಇವರಿಗೆ ಕರ್ನಾಟಕದ ಅನೇಕ ರಾಜರು ಪ್ರೋತ್ಸಾಹ ನೀಡಿ ಸಹಕರಿಸಿರುವುದು ಕಂಡುಬರುತ್ತದೆ. ಅವರಲ್ಲಿ ಗಂಗರು, ಹೊಯ್ಸಳ ಮತ್ತು ಚಾಲುಕ್ಯರ ಕಾಲದಲ್ಲಿ ಈ ಪಂಥದವರು ಕರ್ನಾಟಕದ ಅನೇಕ ಭಾಗಗಳಲ್ಲಿ ವಿದ್ಯಾಕೇಂದ್ರಗಳನ್ನು ಮತ್ತು ಮಠಗಳನ್ನು ಸ್ಥಾಪಿಸಿರುವುದು ತಿಳಿದುಬರುತ್ತದೆ. "ಕಾಳಾಮುಖ ಗುರುಗಳು ಶ್ರೇಷ್ಠ ವಿದ್ವಾಂಸರೂ, ಸಾತ್ವಿಕ ಸ್ವರೂಪದವರೂ ಆಗಿದ್ದು ರಾಜರಿಂದ, ಜನಸಾಮಾನ್ಯರಿಂದ ಪೂಜಿತರಾಗಿದ್ದರು. ವಿದ್ಯಾ ಕೇಂದ್ರಗಳನ್ನು ಕಾಳಾಮುಖ ಯತಿಗಳು ನಡೆಸುತ್ತಿದ್ದರು. ಜನೋಪಕಾರದ ಕಾರ್ಯಗಳಲ್ಲಿ ತೊಡಗಿದ ಇವರ ಮಠಗಳು ಜಾತಿ, ಮತ, ಪಂಥ ಭೇದರಹಿತವಾಗಿ ಸಕಲ ಜನಕೋಟಿಯನ್ನು ಒಂದು ಕುಟುಂಬವಾಗಿ ನೋಡಿಕೊಂಡು ಬಂದಿದ್ದವು."[6] "ಇವಲ್ಲದೆ ಇನ್ನು ಕೆಲವು ಮತ ಪಂಥಗಳು 12ನೇ ಶತಮಾನದ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿದ್ದವು. ಕಾಪಾಲವನ್ನು ಕೈಯಲ್ಲಿ ಹಿಡಿದು ರುಂಡ ಮಾಲೆಯನ್ನು ಧರಿಸಿ ಸ್ಮಶಾನದಲ್ಲಿ ವಾಸಿಸುವ ಕಾಪಾಲಿಕರೂ, ಹಠಯೋಗಿಗಳಾಗಿ ಅಸಹಜ ಆಚರಣೆಗಳಲ್ಲಿ ತೊಡಗಿಕೊಳ್ಳುವ ನಾಥಪಂಥದವರು, ಇಂತಹ ಮತ ಪಂಥಗಳಿಗೆ ಪರ್ಯಾಯವಾಗಿ ತಲೆ ಎತ್ತಿದ ವೀರಶೈವ ಧರ್ಮವು ನೊಂದವರು ಅಸಹಾಯಕರು ಹಾಗೂ ಜಾತಿಯ ಅಪಮಾನದಿಂದ ಕುಗ್ಗಿ ಹೋಗಿರುವ ಜನರಿಗೆ ಮುಕ್ತಿ ಮಾರ್ಗ ತೋರಿದರು, ಮೇಲು– ಕೀಳು ತಾರತಮ್ಯ ಭಾವನೆಗಳನ್ನು ದೂರ ಮಾಡಿ ಮಾನವರ ಘನತೆಯನ್ನು ಎತ್ತಿ ಹಿಡಿದರು.

**ಸಾಮಾಜಿಕ ಸ್ಥಿತಿ:**

ಶಿವಶರಣರ ಚಳಿವಳಿಗೂ ಮುನ್ನ ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜೀವನವು ಜಾತಿ ಪದ್ಧತಿ, ಲಿಂಗ ತಾರತಮ್ಯ, ಬಡವ–ಬಲ್ಲಿದ, ಸ್ಪೃಶ್ಯ–ಅಸ್ಪೃಶ್ಯ, ಮೌಢ್ಯ, ಅಜ್ಞಾನ ಮುಂತಾದ ವ್ಯಾಧಿಗಳಿಂದ ನರಳುತ್ತಿತ್ತು. ಮೇಲು–ಕೀಳು ಎಂಬ ಜಾತಿಗಳ ನಡುವಿನ ಮೇಲಾಟದಲ್ಲಿ ಇಡೀ ಸಮಾಜ ಒಡೆದ ಮನೆಯಂತಾಗಿತ್ತು. ಇದರಿಂದ ನೊಂದ, ಅವಮಾನಕ್ಕೊಳಗಾದ ಶೂದ್ರ, ಅಸ್ಪೃಶ್ಯ ವರ್ಗ ಸದಾ ಕೀಳರಿಮೆಯಿಂದ ನರಳುತ್ತಿತ್ತು. ಬಸವಾದಿ ಶರಣರ ಕ್ರಾಂತಿಯ ಫಲವಾಗಿ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಹಿಂದೆಂದೂ ಕಂಡರಿಯದಂತಹ ಬದಲಾವಣೆಗಳು ಜರುಗಿದವು "ವಿಗ್ರಹ ಪೂಜೆ–ದೇವಸ್ಥಾನ ನಿರ್ಮಾಣಗಳನ್ನು ಖಂಡಿಸಿದರು, ಯಜ್ಞಯಾಗಾದಿಗಳನ್ನು ವಿರೋಧಿಸಿದರು, ವರ್ಣ ಜಾತಿ ವ್ಯವಸ್ಥೆ, ಸ್ತ್ರೀ–ಪುರಷ ಭೇಧ ಬದಲಾವಣೆಗಳು ಜರುಗಿದವು "ವಿಗ್ರಹ ಪೂಜೆ–□□ಮಾ ವರ್ಣ ಜಾತಿ ವ್ಯವಸ್ಥೆ, ಸ್ತ್ರೀ–ಪುರುಷ ಭೇದ, ಸೂತಕಾಚರಣೆ ಇವುಗಳ ಧಿಕ್ಕರಿಸಿ ಅವುಗಳಿಗೆ ವಿರುದ್ಧವಾದುದನ್ನೇ ಪ್ರಸಾರ ಮಾಡಿದರು. ಇವುಗಳಿಂ□□□□ ವೀರಶೈವ ಜನರ □□□□□□□□□ □□□□□□□ ಸೆಳೆದುದರ ಜೊತೆಗೇ, ಈ ಕಾರಣಗಳಿಂದು ಅತ್ಮವಿಶ್ವಾಸ ಕಳೆದುಕೊಂಡಿದ್ದ ಸಾಮಾನ್ಯರನ್ನು ಆಕರ್ಷಿಸುವುದರಲ್ಲಿ □□□□□□□□□ಯಿತು."7 ಹೀಗೆ ಬಹಳ ಬೇಗ ಪ್ರವರ್ಧಮಾನಕ್ಕೆ ಬಂದ ವೀರಶೈವ ಧರ್ಮವು, ವೈದಿಕ ಧರ್ಮದ ಅನೇಕ ಅನಿಷ್ಟ ಪದ್ಧತಿಗಳು, ಜಪ ತಪ ಹೋಮ ಹವನ ಮುಂತಾದ ಆಚರಣೆಗಳ ಹಿಂದಿದ್ದ ಸ್ವಾರ್ಥ ಮತ್ತು ಸಂಚನ್ನು ಬಯಲಿಗೆಳೆಯಿತು. ಜೊತೆಗೆ, ಅವುಗಳ ಸ್ಥಾನದಲ್ಲಿ ಪರ್ಯಾಯವಾಗಿ ಸರಳವಾದ ಸುಲಭವಾದ ಆಚರಣೆಗಳನ್ನು ಅನುಸರಿಸಿ ಮುಕ್ತಿ ಪಡೆಯಬಹುದೆಂಬುದನ್ನು ಶರಣರು ತೋರಿಸಿಕೊಟ್ಟರು.

ಹುಟ್ಟಿನೊಡನೆ ವ್ಯಕ್ತಿಯೊಬ್ಬನ ಕುಲ ಅಥವಾ ಜಾತಿ, ಧರ್ಮವನ್ನು ನಿರ್ಧರಿಸುವುದನ್ನು, ಆ ಮೂಲಕ ಸಮಾಜವನ್ನು ಛಿದ್ರಗೊಳಿಸುವುದನ್ನು ಶರಣರು ವಿರೋಧಿಸಿದರು. ಹುಟ್ಟಿಗೂ ಜಾತಿಗೂ ಸಂಬಂಧವಿಲ್ಲ ಲೋಕದಲ್ಲಿ 'ಭಕ್ತ' ಮತ್ತು 'ಭವಿ' ಈ ಎರಡೇ ಕುಲಗಳು ಎಂದು ಸಾರಿದರು. ಲಿಂಗಧಾರಣೆ ಮಾಡಿಕೊಂಡವರೆಲ್ಲ 'ಭಕ್ತ' ಕುಲ, ಲಿಂಗಧಾರಣೆ ಮಾಡಿಕೊಳ್ಳದವರೆಲ್ಲ 'ಭವಿ'ಗಳಾದರು. ಹೀಗೆ ಸಮಾಜದಲ್ಲಿ ಜಾತಿಭೇದವನ್ನು ಅಳಿಸಲು ಪಣತೊಟ್ಟರು. ಅಲ್ಲದೆ ಕೆಳ ಜಾತಿಗಳಲ್ಲಿ ಇದ್ದ ಕೀಳರಿಮೆಯನ್ನು ಇಲ್ಲವಾಗಿಸಲು ಪ್ರಯತ್ನ ಮಾಡಿದರು.

**"ಕೊಲುವವನೇ ಮಾದಿಗ, ಹೊಲಸ ತಿಂಬುವನೇ ಹೊಲೆಯ**
**ಕುಲವೇನೋ, ಆವಂದಿರ ಕುಲವೇನೋ!**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ**

**ನಮ್ಮ ಕೂಡಲ ಸಂಗನ ಶರಣರೇ ಕುಲಜರು"**[8]

ಎಂಬ ಬಸವಣ್ಣನ ಮಾತುಗಳಲ್ಲಿ ಕುಲ ಅಥವಾ ಜಾತಿ ಎಂಬುದು ಹುಟ್ಟಿನೊಂದಿಗೆ ಅಂಟಿಕೊಂಡು ಬಂದದ್ದಲ್ಲವೆಂಬ ನಿಲುವು ಇದ್ದು ಜನರಲ್ಲಿ ಅರಿವು ಮೂಡಿಸಿರುವುದನ್ನು ಕಾಣಬಹುದು. ವೈದಿಕ ಧರ್ಮದಲ್ಲಿ ಹುಟ್ಟಿನಿಂದ ಕುಲಹೀನರೆಂದು ಭಾವಿಸಲಾದ ಅನೇಕರು ತಮ್ಮ ಪ್ರತಿಭೆ, ಯೋಗ್ಯತೆ ಹಾಗೂ ನಡೆ-ನುಡಿಗಳಿಂದ ಶ್ರೇಷ್ಠರೆನಿಸಿಕೊಂಡವರು ಉನ್ನತ ಸಾಧನೆಗಳನ್ನು ಮಾಡಿದ್ದಾರೆ ಎಂಬುದನ್ನು ಸಹ ಜನಸಾಮಾನ್ಯರಿಗೆ ತೋರಿಸಿಕೊಟ್ಟರು.

**ವ್ಯಾಸ ಭೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ**
**ಮಂಡೋದರಿ ಕಪ್ಪೆಯ ಮಗಳು!**
**ಕುಲವನರಸದಿರಿಂಭೋ! ಕುಲದಿಂದ ಮುನ್ನೇನಾದಿರಿಂಭೋ!**
**ಸಾಕ್ಷಾತ್ ಅಗಸ್ತ್ಯ ಕಬ್ಬಿಲ; ದೂರ್ವಾಸ ಮಚ್ಚಿಗ**
ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ **ಯತಿ**
**ಮೂರು ಭುವನವರಿಯೆ ನಾವಿದ ಕಾಣಿ ಭೋ!**
**ನಮ್ಮ ಕೂಡಲ ಸಂಗನ ವಚನವಿಂತೆಂದುದು ಶ್ವಪಚೋಪಿಯಾದರೇನು ಶಿವಭಕ್ತನೆ ಕುಲಜನು"**[9]

ಹೀಗೆ ತಳಸಮುದಾಯದ ಅನೇಕರು ಮಹತ್ಸಾಧನೆಗೈದು ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ. ಇದರಿಂದ ಕುಲಮದದಿಂದ ಮೆರೆದವರಿಗೆ ಉತ್ತರವನ್ನು ನೀಡಿದರು. ಅಲ್ಲದೆ ಕೀಳರಿಮೆಯಿಂದ ಅವಮಾನಕ್ಕೊಳಗಾದ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬಿದರು. ಆ ಮೂಲಕ ವ್ಯಕ್ತಿಯೊಬ್ಬನ ಹುಟ್ಟಿಗೂ ಮತ್ತು ಜಾತಿಗೂ ಸಂಬಂಧವಿಲ್ಲ ಎಂಬುದನ್ನು ಸಮಾಜಕ್ಕೆ ತೋರಿಸಿಕೊಟ್ಟರು. ಶರಣರ ಇಂತಹ ವಚನಗಳಿಂದ ಜನ ಜಾಗೃತರಾದರು. ಸಮಾನತೆಯನ್ನು ಸಾರುವ ಶರಣ ಧರ್ಮವನ್ನು ಪ್ರೀತಿಯಿಂದಲೇ ಸ್ವೀಕರಿಸಿದರು.

ವೈದಿಕ ಸಂಪ್ರದಾಯದಲ್ಲಿದ್ದ ಹೆಣ್ಣು-ಗಂಡಿನ ಭೇದಭಾವ ಅಥವಾ ಲಿಂಗ ತಾರತಮ್ಯವನ್ನು ಶರಣರು ತೀವ್ರವಾಗಿ ಖಂಡಿಸಿದರಲ್ಲದೆ ಇಂತಹ ತಾರತಮ್ಯಕ್ಕೆ ಅರ್ಥವಿಲ್ಲ ಎಂದು ಸಾರಿದರು.

**"ಮೊಲೆ ಮುಡಿ ಬಂದಡೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದಡೆ ಗಂಡೆಂರು**
**ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ"**[10]

ಎಂಬ ದಾಸಿಮಯ್ಯನ ಮಾತುಗಳು 'ಗಂಡು-ಹೆಣ್ಣು ಎಂಬ ವ್ಯತ್ಯಾಸ ಕೇವಲ ಆದರೆ ಅತ್ತ ಗಂಡೂ ಜೈವಿಕ ವಿಚಾರಕ್ಕೆ ಸಂಬಂಧಿಸಿದ್ದು. ಈ ವ್ಯತ್ಯಾಸ ಕಣ್ಣಿಗೆ ಕಾಣುವಂತಹುರು ಅನೇಕ ಹೆಂಗಸರು ಶಿವಭಕ್ತಿಯಲ್ಲಿ ತೊಡಗಿ ಸಾಧನೆಗೈದರು. ಅಲ್ಲದೆ ತಮ್ಮ ವ್ಯತ್ಯಾಸಗಳು ಅಡ್ಡಿಯಿಲ್ಲ' ಎಂದು ಸ್ಪಷ್ಟಪಡಿಸಿದರು. ಇದರಿಂದ ಉತ್ತೇಜಿತರಾಗಿ ಅನಿಸಿಕೆ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಿದರು. ಮಹಾಘನ ಶರಣರೂ ಜ್ಞಾನಿಗಳೂ ಆದ ಬಸವಣ್ಣ, ಅಲ್ಲಮಪ್ರಭು, ದಾಸಿಮಯ್ಯ, ಸಿದ್ದರಾಮ ಮುಂತಾದವರೊಡನೆ ಮಹಾಮನೆಯಲ್ಲಿ ಚರ್ಚೆ, ಸಂವಾದಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅಲ್ಲದೆ ತಮ್ಮ ಅನುಭವಗಳನ್ನು ವಚನ ರೂಪದಲ್ಲಿ ಅಭಿವ್ಯಕ್ತಪಡಿಸುವುದರ ಮೂಲಕ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರಲ್ಲಿ ಮುಖ್ಯವಾಗಿ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಅಕ್ಕ ನಾಗಮ್ಮ ಮುಂತಾದವರು ಧಾರ್ಮಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಉನ್ನತವಾದ ಸಾಧನೆಗೈದರು.

'ಹೆಣ್ಣು' ಗಂಡಿನ ಆಧ್ಯಾತ್ಮ ಸಾಧನೆಗೆ ಅಡ್ಡಿಯೆಂದು ಭಾವಿಸಲಾಗಿತ್ತು. ಸಂಸಾರ ಸಾಗರದಲ್ಲಿ ಈಜಿ ದಡ ಮುಟ್ಟುವುದು ಅಸಾಧ್ಯವೆಂದೂ ಈ ಹೆಣ್ಣು ಮತ್ತು ಸಾಂಸಾರಿಕ ಬಂಧನದಿಂದ ಬಿಡುಗಡೆ ಪಡೆಯದ ಹೊರತು ಆಧ್ಯಾತ್ಮಿಕ ಸಾಧನೆ ಸಾಧ್ಯವಿಲ್ಲ ಎಂಬ ನಂಬಿಕೆ ಬಲವಾಗಿದ್ದ ಸಂದರ್ಭದಲ್ಲೇ ಅಲ್ಲಮಪ್ರಭು-

**"ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಶೆಯೇ ಮಾಯೆಕಾಣಾ ಗುಹೇಶ್ವರ"**[11]

ಹೊನ್ನು, ಹೆಣ್ಣು, ಮಣ್ಣು ಮಾಯೆ ಎಂಬ ಧೋರಣೆಯನ್ನೇ ಅಲ್ಲಮಪ್ರಭು ಛಿದ್ರಗೊಳಿಸಿದರು. ಆ ಮೂಲಕ ಆಧ್ಯಾತ್ಮಿಕ ಸಾಧನೆಗೆ ಹೆಣ್ಣಾಗಲಿ ಸಂಸಾರವಾಗಲಿ ಅಡ್ಡಿಯಿಲ್ಲ ಎಂಬುದನ್ನು ಸಾಧಿಸಿತೋರಿಸಿದರು. ಅಷ್ಟೇ ಅಲ್ಲ ಹೆಣ್ಣಿನ ಆಧ್ಯಾತ್ಮಿಕ ಸಾಧನೆಗೆ ಗಂಡು ಕೂಡ ಅಡ್ಡಿಯಿಲ್ಲ ಎಂಬ ಸತ್ಯವನ್ನು ಸಾಕಾರಗೊಳಿಸಿದರು.

ವೈದಿಕ ಧರ್ಮದಲ್ಲಿ ಆಚರಣೆಯಲ್ಲಿದ್ದ ವಿಗ್ರಹ ಪೂಜೆಯನ್ನು ಶರಣ ಸಮುದಾಯ ಪ್ರಭಲವಾಗಿ ವಿರೋಧಿಸಿತು. ಸಮಾಜದಲ್ಲಿ ಬಿತ್ತಿದರು. ಅಲ್ಲದೇ, ದೇವಾಲಯಕ್ಕೆ ಸೀಮಿತವಾಗಿದ್ದ ದೇವರನ್ನು ತಾವು ಇದ್ದಲ್ಲಿಗೆ ಬರುವಂತೆ, ತಮ್ಮ ಕಾಯದಲ್ಲೇ ದೇವರನ್ನು ಕಾಣುವಂತೆ ಮಾಡಿದರು. ಜನರಿಗೆ ಬಸವಣ್ಣನವರು ಸಾಂತ್ವನ ಹೇಳಿದರಲ್ಲದೆ, ದೇವಾಲಯದ ಹೊಸ ಪರಿಕಲ್ಪನೆ ನೀಡಿದರು.

**"ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡುವೆ? ಬಡವನಯ್ಯ**
**ಎನ್ನಕಾಲೇ ಕಂಭ, ದೇಹವೇ ದೇಗುಲ,**
**ಶಿರ ಹೊನ್ನ ಕಳಸವಯ್ಯ; ಕೂಡಲಸಂಗಮದೇವ, ಕೇಳಯ್ಯ;**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"**[12]

ಇಂತಹ ಪರಿಕಲ್ಪನೆಯಿಂದ ಬಹುಜನಸಾಮಾನ್ಯವಾದ ಈ ವಿಧಾನವನ್ನು ಜನ ಒಪ್ಪಿ ತಾವಿದ್ದಲ್ಲಿ, ತಾವು ಮಾಡುವ ಕಾಯಕದಲ್ಲಿ ಶಿವನನ್ನು ಕಾಣುವಂತಾಯಿತು. ಬಸವಣ್ಣನವರ ಇಂತಹ ದೇಹವೇ ದೇವಾಲಯ ಪರಿಕಲ್ಪನೆಗೆ ಮಹತ್ವ ಬಂದಿತು.

**ಸಾಹಿತ್ಯ ಸ್ವರೂಪ:**

12ನೆಯ ಶತಮಾನದ ಶಿವಶರಣರ ಕ್ರಾಂತಿ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿದಂತೆ, ಕನ್ನಡ ಸಾಹಿತ್ಯದ ಮೇಲೆ ಗಾಢ ಪ್ರಭಾವ ಬೀರಿರುವುದನ್ನು ಭಾಷೆ, ವಸ್ತು ಮತ್ತು ಶೈಲಿಗಳನ್ನು ಗಮಿಸಿದರೆ ಗೋಚರವಾಗುತ್ತದೆ. ವಸ್ತುವಿನ ದೃಷ್ಟಿಯಿಂದ ನೋಡುವುದಾದರೆ, ಚಂಪೂ ಕಾವ್ಯಗಳು ಪ್ರಸಿದ್ಧ ಪುರಾಣದ ಪ್ರಸಂಗಗಳು ಮತ್ತು ವ್ಯಕ್ತಿಗಳನ್ನು ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡಿದ್ದವು. ತಾವು ಆರಿಸಿಕೊಂಡ ಕಥಾವಸ್ತುವನ್ನು ತಮ್ಮ ಧಾರ್ಮಿಕ ದೃಷ್ಟಿಯಿಂದ ನಿರೂಪಿಸಿದರು. ಆದರೆ ವಚನಕಾರರು ಚಂಪೂ ಕವಿಗಳಂತೆ ಯಾವುದೇ ಪುರಾಣ ಅಥವಾ ಪುಣ್ಯ ಪುರುಷರ ಕಥೆಯನ್ನು ಹೇಳಲು ಹೊರಟವರಲ್ಲ. ಅವರು ತಮ್ಮ ವಚನಗಳಿಗೆ ಬಳಸಿಕೊಂಡ ವಸ್ತು ಅಂದಿನ ಸಮಾಜದ ಜನಜೀವನದಲ್ಲಿ ಕಂಡುಬಂದ ಲೋಪದೋಷಗಳನ್ನು ಅಂದರೆ ಲಿಂಗ ತಾರತಮ್ಯ, ಜಾತಿಭೇದ, ಮೇಲು–ಕೀಳು, ಬಡವ–ಶ್ರೀಮಂತ ಸ್ಪೃಶ್ಯ–ಅಸ್ಪೃಶ್ಯ, ಆಚಾರ–ವಿಚಾರ ಹಾಗೂ ಭಕ್ತ, ಭಗವಂತ ಹೀಗೆ ಅಂದಿನ ವಸ್ತುಸ್ಥಿತಿಯನ್ನು ನಿರೂಪಿಸಿದರು.

ಚಂಪೂ ಕವಿಗಳು ಸಮಾಜದ ಉನ್ನತ ವರ್ಗಕ್ಕೆ ಸೇರಿದವರಾಗಿದ್ದರು. ಅವರು ತಮ್ಮ ಕಾವ್ಯಗಳಿಗೆ ಆಯ್ಕೆ ಮಾಡಿಕೊಂಡ ಕಥಾವಸ್ತು ಪುರಾಣ ಪ್ರಸಂಗಗಳಾದ ಕಾರಣ ಸಾಮಾನ್ಯ ಜನರ ಬದುಕನ್ನು ಅವರ ಬವಣೆಗಳನ್ನು ಚಿತ್ರಿಸಲು ಅವಕಾಶವಿರಲಿಲ್ಲ. ಆದರೆ ವಚನಕಾರರು ಆಯ್ಕೆ ಮಾಡಿಕೊಂಡ ವಸ್ತು ಅಂದಿನ ಸಮಾಜದ ಆಗುಹೋಗುಗಳನ್ನು ಕುರಿತದ್ದು ಮತ್ತು ವಚನಕಾರರಲ್ಲಿ ಸಮಾಜದ ಎಲ್ಲಾ ಸ್ತರದ ಎಲ್ಲಾ ಜಾತಿ ಜನರು ಸಾಹಿತ್ಯ ರಚನೆಯಲ್ಲಿ – ತೊಡಗಿಕೊಂಡಿದ್ದರು. ಉನ್ನತ ಜಾತಿಯ ಬಸವಣ್ಣನಿಂದ ಮೊದಲುಗೊಂಡ ಅಂಬಿಗರ ಚೌಡಯ್ಯ, ದೇವರ ದಾಸಿಮಯ್ಯ, ಆಯ್ದಕ್ಕಿ ಮಾರಯ್ಯ,

ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಬೊಕ್ಕಸದ ಸಂಗಣ್ಣ, ಹಡಪದಪ್ಪಣ್ಣ, ಅರಿವಿನ ಮಾರಿತಂದೆ, ತುರುಗಾಹಿ ರಾಮಣ್ಣ, ಬಹುರೂಪಿ ಚೌಡಯ್ಯ ಹೀಗೆ ಅನೇಕ ಸ್ತರದ ವೃತ್ತಿಗಳಲ್ಲಿದ್ದ ವಚನಕಾರರಿದ್ದರು. ಇವರಲ್ಲದೆ ಅಕ್ಕಮಹಾದೇವಿ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವ, ಕಾಳವ್ವ, ಅಕ್ಕ ನಾಗಮ್ಮ ಮುಂತಾದ ಮಹಿಳೆಯರು ಸ್ವತಂತ್ರವಾಗಿ, ನಿರ್ಭೀತಿಯಿಂದ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಮಾಜಿಕ ಕಟ್ಟುಪಾಡುಗಳ ಸಂಕೋಲೆಯಿಂದ ಬಂಧಿತರಾಗಿದ್ದ ಅನೇಕ ಕೆಳಜಾತಿಯ ಜನರು ವಚನ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಚಂಪೂ ಯುಗದ ಬಹಳಷ್ಟು ಕವಿಗಳು ರಾಜಾಶ್ರಯವನ್ನು ಪಡೆದಿದ್ದರು. ತಮ್ಮ ಕಾವ್ಯದಲ್ಲಿ ತನ್ನ ಆಶ್ರಯದಾತನಾದ ರಾಜನನ್ನು ಕಾವ್ಯದ ನಾಯಕನೊಂದಿಗೆ ಸಮೀಕರಿಸಿ ವರ್ಣಿಸುತ್ತಿದ್ದರು. ಕಾರಣ ಆಶ್ರಯದಾತನ ಅನ್ನದ ಹಂಗು ಅಥವಾ ಸ್ವಾಮಿನಿಷ್ಠೆ ಎನ್ನಬಹುದು. ಆದರೆ ವಚನಕಾರರಲ್ಲಿ ಕೆಲವರು ರಾಜನ ಆಸ್ಥಾನದಲ್ಲಿದ್ದರೂ ರಾಜಪ್ರಭುತ್ವವನ್ನು ಬಹಿರಂಗವಾಗಿ ವಿರೋಧಿಸಿದರು. ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ಬಸವಣ್ಣ "ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ!" ಎಂದು ಹೇಳುತ್ತಾರೆ. ಮತ್ತೊಂದು ಸಂದರ್ಭದಲ್ಲಿ "ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯಾ ಪ್ರಥಮರು ಕೊಡುವೆನುತ್ತರವನಿಗೆ...." ಎಂದು ನುಡಿಯುತ್ತಾರೆ. ಹೀಗೆ ಪ್ರಭುತ್ವ ಅಥವಾ ರಾಜನ ವಿರುದ್ಧ ಮಾತನಾಡುವ ಬಸವಣ್ಣನವರ ಧೈರ್ಯ ಮೆಚ್ಚಲೇಬೇಕು. ಇದು ಶಿವಶರಣರ ನಿಜವಾದ ಶಕ್ತಿ. ಚಂಪೂ ಕವಿಗಳಂತೆ ವಚನಕಾರರು ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ಕಾವ್ಯ ಮಾರ್ಗಗಳನ್ನು ಅನುಸರಿಸಲಿಲ್ಲ. ಹಾಗೆಯೇ ಅವರಂತೆ ದೀರ್ಘ ಮತ್ತು ವಿಸ್ತಾರವಾದ ಕಥೆಗಳನ್ನು ಹೇಳಲಿಲ್ಲ. ಚಂಪೂ ಕಾವ್ಯಗಳಲ್ಲಿ ವಚನಕಾರರಿಗೆ ವಚನಗಳು ಆ ಕ್ಷಣದ ಕ್ರಿಯೆಗಳಿಗೆ ಪ್ರತಿಕ್ರಿಯೆಗಳಾಗಿದ್ದವು.

ಚಂಪೂ ಕವಿಗಳು ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆ ಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಇವರು ಸಂಸ್ಕೃತಭೂಯಿಷ್ಟವಾದ ಕನ್ನಡದಲ್ಲಿ ಕಾವ್ಯರಚನೆಯನ್ನು ಮಾಡಿದ್ದರು. ಅವರು ಬಳಸಿದ ಛಂದೋಪ್ರಕಾರ ಗಳು ಬಹುಪಾಲು ಸಂಸ್ಕೃತದಿಂದ ಎರವಲು ಪಡೆದಿದ್ದು ಆದರೆ ವಚನಕಾರರು ಮಾರ್ಗಕಾವ್ಯದ ಕಟ್ಟುಪಾಡುಗಳನ್ನು ಮುರಿದು ತಿಳಿಯಾದ ಕನ್ನಡದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ವಚನಕಾರರು ಜನರ ಆಡುನುಡಿಗೆ ಹತ್ತಿರ ಭಾಷೆಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡರು. ಆ ಮೂಲಕ ಜನರ ಮನಸ್ಸನ್ನು ಸೂಲಭವಾಗಿ ತಲುಪಿದರು. ಇದರ ಜೊತೆಗೆ ಕನ್ನಡ ಭಾಷೆಗೆ ವಿಶೇಷವಾದ ಮಾನ್ಯತೆ ನೀಡಿದರು.

## ಅಡಿ ಟಿಪ್ಪಣಿಗಳು


1. ಕರ್ನಾಟಕ ಇತಿಹಾಸ ಎಂ.ವಿ. ಕೃಷ್ಣರಾವ್, ಪುಟ–710
2. ಕನ್ನಡ ಸಾಹಿತ್ಯ ಚರಿತ್ರೆ ರಂ.ಶ್ರೀ. ಮುಗಳಿ, ಪುಟ–6
3. ಅದೇ ಪುಟ 93–94
4. ವಚನ ಸಾಹಿತ್ಯ, ಚಿದಾನಂದಮೂರ್ತಿ ಎಂ. ಸಂ. 5, ಪುಟ–33
5. ಕನ್ನಡ ನಾಡಿನ ಚರಿತೆ, ಭಾಗ–2, ನಂದಿಮಠ ಎಸ್.ಸಿ. ಪುಟ–12
6. ವಚನಾನುಶೀಲನ ಎಸ್. ವಿದ್ಯಾಶಂಕರ್, ಪುಟ 149
7. ವಚನ ಪರಿಸರ– ಡಾ. ಪಿ.ವಿ. ನಾರಾಯಣ, ಪುಟ 392
8. ವಚನ ಸಾಹಿತ್ಯ ಸಂಗ್ರಹ ಸಂ: ಸಂ.ಶಿ. ಭೂಸನೂರ ಮಠ, ಪುಟ–299,
9. ಅನುಭಾವ ಸಾಹಿತ್ಯದ ಅನನ್ಯತೆ (ಸಂ) ಡಾ. ಜಿ.ಎಸ್. ಉಪಾಧ್ಯ
10. ವಚನ ಸಾಹಿತ್ಯ ಸಂಗ್ರಹ (ಸಂ) ಸಂ.ಶಿ. ಭೂಸನೂರಮಠ, ಪುಟ–296
11. ಅದೇ, ಪುಟ–50
12. ಅದೇ, ಪುಟ–538